ಸಿವಿಲ್ ಮಿಸಲೆನಿಯಸ್ ನಂ. 7/2019 ಪಿ.ಡಬ್ಲ್ಯು-1

(ಇಂದು ದಿನಾಂಕಃ 11-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

**ಪಾಟೀ ಸವಾಲು ಎಜಿಪಿ ಎದುರುದಾರ ಪರ ವಕೀಲರಿಂದಃ**

1. ನಾನು ಎಲೆಕಟ್ರೀಷನ ಕೆಲಸ ಮಾಡುತ್ತೇನೆ. ನನಗೆ ಸದರಿ ಕೆಲಸದಿಂದ ಎಷ್ಟು ಸಂಬಳ ಬರುತ್ತದೆ ಎಂದರೆ ಸಾಕ್ಷಿ ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ನಾನು ಈಗಲು ಎಲೆಕಟ್ರೀಷನ ಕೆಲಸ ಮಾಡುತ್ತಿದ್ದು ನನಗೆ ಆದಾಯ ಬರುತ್ತಿದೆ ಎಂದರೆ ಸರಿಯಲ್ಲ. ನನಗೆ ಜಮೀನು ಇರುವುದಿಲ್ಲ. ನನ್ನ ತಂದೆ-ತಾಯಿ ಅಣ್ಣ ತಮ್ಮಂದಿರು ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ

ಯಾವುದೇ ಜಮೀನು ಇರುವುದಿಲ್ಲ. ನನ್ನ ತಂದೆ -ತಾಯಿ ಅಣ್ಣ ತಮ್ಮಂದಿರು ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಯಾವುದೇ ಜಮೀನು ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಒಂದು ಮನೆ ಇರುತ್ತದೆ. ನಿ.ಪಿ-6 ಚಿಂಚೋಳಿ ತಾಲೂಕಿನ ಬಗ್ಗೆ ಇದ್ದು ಬೇರೆ ಊರುಗಳಲ್ಲಿ ಆಸ್ತಿ ಇರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಶುಲ್ಕ ಪಾವತಿಸಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಶ್ರೀ ಎಸ್.ಎ.ಪಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.